# ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ದಾವಣಗೆರೆ.

**ಅಧಿಸೂಚನೆ ಸಂಖ್ಯೆ: 05 , ದಿನಾಂಕ: 20-07-2024.**

ದಾವಣಗೆರೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿಗಳಿಗೆ, ಅರೆಕಾಲಿಕ ಕಾನೂನು ಸ್ವಯಂ ಸೇವಕರ ಪಟ್ಟಿಯನ್ನು ಪರಿಷ್ಕರಿಸುವ/ಹೊಸದಾಗಿ ನೇಮಕಾತಿ

**ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:**

ಉಲ್ಲೇಖ: 1. ಕ.ರಾ.ಕಾ.ಸೇ.ಪ್ರಾ, ಬೆಂಗಳೂರು ರವರ ಪತ್ರ ಸಂಖ್ಯೆ:ಕೆಎಸ್‌ಎಲ್‌ಎಸ್‌ಎ: 06/ ಪಿಎಲ್‌ವಿ/ 2022/ 486-2022, ದಿನಾಂಕ: 19-02-2020.
2. ಅರೆ ಕಾಲಿಕ ಕಾನೂನು ಸ್ವಯಂ ಸೇವಕರ ನಿಯೋಜನೆ ನಿಯಮಗಳು.

****

ಉಲ್ಲೇಖಿತ ನಿಯಮ ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಪತ್ರದನ್ವಯ ಜಿ.ಕಾ.ಸೇ.ಪ್ರಾ./ತಾ.ಕಾ.ಸೇ.ಸಮಿತಿಗಳಿಗೆ ವಿವಿಧ ರೀತಿಯ ಸಂಸ್ಥೆಗಳಿಗೆ ಕಾನೂನು ನೆರವು/ಸೇವೆಗಳನ್ನು ನೀಡುವ ಸಲುವಾಗಿ ಅರೆಕಾಲಿಕ ಕಾನೂನು ಸ್ವಯಂ ಸೇವಕರನ್ನು ಈ ಕೆಳಕಂಡತೆ ಆಯ್ಕೆ ಮಾಡಬೇಕಾಗಿರುತ್ತದೆ.

ಶಿಕ್ಷಕರು(ನಿವೃತ್ತ ಶಿಕ್ಷಕರು ಸೇರಿ), ನಿವೃತ್ತ ಸರ್ಕಾರಿ ನೌಕರರು, ಹಿರಿಯ ನಾಗರೀಕರು, ಎಂ.ಎಸ್.ಡಬ್ಲ್ಯೂ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರು, ಅಂಗನವಾಡಿ ಕಾರ್ಯಕರ್ತೆಯರು, ವೈದ್ಯರು, ಕಾನೂನು ವಿದ್ಯಾರ್ಥಿಗಳು (ವಕೀಲರಾಗಿ ನೋಂದಾಣಿ ಆಗುವವರೆಗೂ), ವಿದ್ಯಾರ್ಥಿಗಳು, ರಾಜಕೀಯವಲ್ಲದ ಸಂಘ ಸಂಸ್ಥೆಗಳ ಸದಸ್ಯರು, ಸೇವಾ ಮನೋಭಾವವಿರುವ ಸರ್ಕಾರೇತರ ಸಂಘ ಸಂಸ್ಥೆಗಳು, ಮಹಿಳಾ ಸ್ವ-ಸಹಾಯ ಸಂಘಗಳು, ಮೈತ್ರಿ ಸಂಘಗಳು, ವಿದ್ಯಾವಂತ ಉತ್ತಮ ನಡೆತೆಯುಳ್ಳ ಯಾವುದೇ ವ್ಯಕ್ತಿ, ಹೆಚ್ಚಿನ ಅವಧಿ ಕಾರಾಗೃಹದಲ್ಲಿ ಕಳೆಯುತ್ತಿರುವ ಅಪರಾಧಿಗಳು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಪಿಎಲ್‌ವಿ ಎಂದು ನಿರ್ಧರಿಸುವ ಇತರೆ ವ್ಯಕ್ತಿಗಳು.

Scanned with OKEN Scanner

ಜಿಲ್ಲೆಯ ಹಾಗೂ ಆಯಾ ತಾಲ್ಲೂಕುಗಳಿಂದ ಗೌರವ ಧನದ ಆಧಾರದ ಮೇರೆಗೆ ನೇಮಕಾತಿಗೆ ಆಸಕ್ತ ಅಭ್ಯರ್ಥಿಗಳಿಂದ ವರ್ಗೀಕರಣದನ್ವಯ ನಿಗಧಿತ ನಮೂನೆಯಲ್ಲಿ ಇಚ್ಛೆಯ ಪತ್ರವನ್ನು ಒಳಗೊಂಡಂತೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.



| ಕ್ರ. ಸಂ. | ಜಿಲ್ಲಾ ಕೇಂದ್ರ/ತಾಲ್ಲೂಕು | ಭರ್ತಿ ಮಾಡಬೇಕಾದ ಹುದ್ದೆಗಳು |
|---|---|---|
| 01 | ದಾವಣಗೆರೆ | 50 |
| 02 | ಹರಿಹರ | 25 |
| 03 | ಚನ್ನಗಿರಿ | 25 |
| 04 | ಹೊನ್ನಾಳಿ-ನ್ಯಾಮತಿ | 25 |
| 05 | ಜಗಳೂರು | 25 |

**ವಿದ್ಯಾರ್ಹತೆಃ**

1) ಅಕ್ಷರಸ್ಥರಾಗಿದ್ದು ಕನಿಷ್ಟ ಪಕ್ಷ ಎಸ್‌ಎಸ್‌ಎಲ್‌ಸಿ ಪಾಸಾಗಿರಬೇಕು.

2) ಯಾವುದೇ ಘಟನೆ, ಪರಿಸ್ಥಿತಿ, ವಿಷಯಗಳನ್ನು ಉತ್ತಮವಾಗಿ ಗ್ರಹಿಸಬಲ್ಲವರಾಗಿರಬೇಕು.

**ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲಾತಿಗಳುಃ**

1) ತಮ್ಮ ಹೆಸರು, ವಿಳಾಸ, ಇತ್ತಿಚಿನ ಪಾಸ್ ಪೋರ್ಟ್ ಅಳತೆಯ ಭಾವಚಿತ್ರ ಇತ್ಯಾದಿ ಸ್ವವಿವರವಿರುವ ಅರ್ಜಿ.

2) ವಿದ್ಯಾರ್ಹತೆಯ ದಾಖಲಾತಿಗಳು

3) ಕಾರ್ಯನಿರ್ವಹಿಸಲು ಇಚ್ಛಿಸುವ ಸ್ಥಳದ ಬಗ್ಗೆ ಸ್ವಇಚ್ಛೆ ಪತ್ರ.

4) ತಮ್ಮ ಮೊಬೈಲ್ ಸಂಖ್ಯೆಯನ್ನು ಅವಶ್ಯಕವಾಗಿ ನಮೂದಿಸತಕ್ಕದ್ದು.

ಮೇಲ್ಕಂಡ ನೇಮಕಾತಿಯು ತಾತ್ಕಾಲಿಕವಾಗಿರುತ್ತದೆ ಹಾಗೂ ಯಾವುದೇ ಸಂಬಳ-ವೇತನಗಳು ಇರುವುದಿಲ್ಲ, ಕೇವಲ ಗೌರವಧನದ ಆಧಾರದ ಮೇಲೆ ನಿರ್ಧಿಷ್ಟ ಅವಧಿಗೆ ಮಾತ್ರ ನೇಮಕಾತಿ/ನಿಯೋಜನೆ ಮಾಡಲಾಗುವುದು. ಅಭ್ಯರ್ಥಿಗಳು ಯಾವುದೇ ಆಧಾಯದ ಆಸೆಯಿಂದ ಅರ್ಜಿ ಸಲ್ಲಿಸತಕ್ಕದ್ದಲ್ಲ ಹಾಗೂ ಸದರಿ ಹುದ್ದೆಯನ್ನು ಖಾಯಂಗೊಳಿಸುವ ಬಗ್ಗೆ ಅಥವಾ

Scanned with OKEN Scanner

ಮುಂದುವರೆಸುವ ಬಗ್ಗೆ ಈ ಪ್ರಾಧಿಕಾರ ಯಾವುದೇ ಆಶ್ವಾಸನೆ ನೀಡುವುದಿಲ್ಲ ಹಾಗೂ ಅಭ್ಯರ್ಥಿಗಳು ಈ ಬಗ್ಗೆ ಹಕ್ಕು ಮಂಡಿಸಲು ಅರ್ಹರಾಗಿರುವುದಿಲ್ಲ.

ಸ್ವಂತ ಕೈಬರಹದಲ್ಲಿ ಭರ್ತಿ ಮಾಡಿದ ಅರ್ಜಿ ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಅಂಚೆ ಮೂಲಕ ಅಥವಾ ಖುದ್ದಾಗಿ ಅಧ್ಯಕ್ಷರು, ಜಿ.ಕಾ.ಸೇ.ಪ್ರಾ. ಹಳೇ ನ್ಯಾಯಾಲಯದ ಆವರಣ ಜನತಾ ಬಜಾರ್ ಪಕ್ಕ, ದಾವಣಗೆರೆ-577002 ಇಲ್ಲಿಗೆ ದಿನಾಂಕ: 30-7-2024ರ ಒಳಗಾಗಿ **"ಅರೆ ಕಾಲಿಕ ಕಾನೂನು ಸ್ವಯಂ ಸೇವಕರ ನೇಮಕಾತಿಗಾಗಿ, ಜಿಲ್ಲಾ-ತಾಲ್ಲೂಕು ಕಾನೂನು ಸೇವಾ ಸಮಿತಿಗೆ"** ಎಂಬ ಶಿರ್ಷಿಕೆ ಬರೆದು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಲು ತಿಳಿಸಿದೆ.

ಅಭ್ಯರ್ಥಿಗಳಿಗೆ ಸಂದರ್ಶನದ ದಿನಾಂಕ ಮತ್ತು ಸಮಯವನ್ನು ದೂರವಾಣಿ ಮೂಲಕ ತಿಳಿಸಲಾಗುವುದು.

ಗೌರವಾನ್ವಿತ ಅಧ್ಯಕ್ಷರು ಜಿ.ಕಾ.ಸೇ.ಪ್ರಾ., ದಾವಣಗೆರೆ
ಇವರ ಆದೇಶದ ಮೇರೆಗೆ.

20/7/2024

ದಿನಾಂಕ: 20/7/2024
ಸ್ಥಳ: ದಾವಣಗೆರೆ

(ಮಹಾವೀರ ಮ.ಕರೆಣ್ಣವರ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಸದಸ್ಯ ಕಾರ್ಯದರ್ಶಿಗಳು,
ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ,
ದಾವಣಗೆರೆ.

Scanned with OKEN Scanner

APPLICATION FOR THE PARA LEGAL VOLUNTEER IN
DISTRICT/TALUKA LEGAL SERVICE AUTHORITY

RECENT
PASS PORT
SIZE PHOTO

| | | |
|---|---|---|
| 01 | Name of the applicant | |
| 02 | Father/mother/spouse name | |
| 03 | Age and Date of Birth | |
| 04 | Address permanent/current | |
| 05 | Land line number | |
| 06 | Mobile number | |
| 07 | E mail address | |
| 08 | Educational qualification | |
| 09 | Caste<br>If belongs to SC/ST/OBC or category, General etc., please specify | |
| 10 | Languages knows to read and write | |
| 11 | Preferred place wherein the applicant is interested to serve | |

I hereby declare that having understood the objectives and purposes of appointment of the Para Legal Volunteer & accordingly I have filed this application.

Place:
Date:

Signature of the applicant

Scanned with OKEN Scanner